# ಕಣ್ಣಾರೆ ಕಂಡೆನಚ್ಯುತನ ಕಂಚಿ ಪುಣ್ಯಕೋಟಿ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi. These wordings are slightly different from the above two and not considered here.
4. **Note:** The wordings given without highlights are as per Ref. 1. The wordings in Ref. 2 are similar to Ref. 1 except few differences which are marked in yellow highlights.
5. **Note:** Singer has followed the lyrics as in Ref.2.

ರಾಗ ಆನಂದ ಭೈರವಿ ಅಟ ತಾಳ

ಕಣ್ಣಾರೆ ಕಂಡೆನಚ್ಯುತನ ಕಂಚಿ
ಪುಣ್ಯಕೋಟಿ ಕರಿರಾಜ ವರದನ ॥ ಪ ॥

ವರ ಮಣಿ ಮುಕುಟ ಮಸ್ತಕನ ಸುರ
ವರ ಸನಕಾದಿ ವಂದಿತ ಪಾದಯುಗನ
ತರುಣಿ ಲಕ್ಷ್ಮೀ ಮನೋಹರನ ಪೀತಾಂ
ಬರದುಡಿಗೆಯಲಿ ರಂಜಿಸುವ ವಿಗ್ರಹನ ॥ 1 ॥

ಕಸ್ತೂರಿ (ಪೆರೆನೊಸಲವನ) (ತಿಲಕ ನೊಸಲನ) ತೋರ
ಮುತ್ತಿನ ಹಾರ ಪದಕವ ಧರಿಸುವನ
ಎತ್ತಿದ ಅಭಯ ಹಸ್ತದವನ ತನ್ನ
ಭಕ್ತರ ಸ್ತುತಿಗೆ ಹಾರೈಸಿ ಹಿಗ್ಗುವನ ॥ 2 ॥

ನೀಲ ಮೇಘ ಶ್ಯಾಮಲನ ದೇವ

ಲೋಲ ಮಕರ ಕುಂಡಲ (ಧರಿಸಿಹನ) (ಧರಿಸುವನ)
(ಮೂಲೋಕದೊಳಗೆ) (ಭೂಲೋಕದೊಳು) ಚೆನ್ನಿಗನ ಶ್ರೀ ಕಮ
ಲಾಲಯಾ ಪತಿ ವೈಕುಂಠ ವಲ್ಲಭನ ॥ 3 ॥

ಭಾನು ಕೋಟಿ ತೇಜದವನ ಭವ
(ಕಾನನ ರಾಶಿಗೆ) (ಕಾನನಕೆ ದೀಪ್ತ) ಹವ್ಯ ವಾಹನನ
ದಾನವರೆದೆಯ ತಲ್ಲಣನ ಮುನಿ
ಮಾನಸ ಹಂಸನೆಂದೆನಿಸಿ ಮೆರೆವನ ॥ 4 ॥

ತುಂಗ ಚತುರ್ಭುಜದವನ (ಶುಭ) (ಶುದ್ಧ)
(ಮಂಗಳ ರೇಖೆ ಅಂಗಾಲಲೊಪ್ಪುವನ)
(ಮಂಗಳ ರೇಖೆಯಂಗದಲಿ ಒಪ್ಪುವನ)
(ಶೃಂಗಾರ ಹಾರ) (ಶೃಂಗಾರ ಕಂಬು) ಕಂಧರನ ದೇವ
ಗಂಗೆಯ ಪಿತ ಪುರಂದರ ವಿಠಲನ ॥ 5 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಪುಣ್ಯಕೋಟಿ** – ವರದರಾಜನ ಗುಡಿಯ ವಿಮಾನದ ಹೆಸರು.

**ಕಸ್ತೂರಿ ತಿಲಕ ನೊಸಲನ** – ಹಣೆಯ ಮೇಲೆ ಕಸ್ತೂರಿ ತಿಲಕವನ್ನು ಧರಿಸಿದವನ.

**ತೋರ** – ದಪ್ಪನಾದ.

**ಎತ್ತಿದಾಭಯ ಹಸ್ತ** – ಬಲಗೈಯಲ್ಲಿ ಅಭಯ ಮುದ್ರೆಯನ್ನು ಧರಿಸಿರುವ.

**ಮಕರ ಕುಂಡಲ** – ಕಿವಿಗಳಲ್ಲಿ ಧರಿಸುವ ಆಭರಣ ವಿಶೇಷ; ಮೊಸಳೆಯಾಕಾರದಲ್ಲಿರುವ ಓಲೆ.

**ಭವ ಕಾನನಕೆ...** – ಸಂಸಾರವೆಂಬ ಕಾಡನ್ನು ಸುಡುವಂಥ ಬೆಂಕಿ (ಹವ್ಯವಾಹನ)ಯಂತೆ ಇರುವ.

**ದಾನವರೆದೆದಲ್ಲಣ** – ರಾಕ್ಷಸರ ಎದೆಯನ್ನು ತಲ್ಲಣಗೊಳಿಸುವವ.

**ಮುನಿ ಮಾನಸ ಹಂಸ** – ಮುನಿಗಳ ಅಂತರಂಗದಲ್ಲಿ ವಿಹರಿಸುವ ರಾಜಹಂಸ.

**ಕರಿರಾಜ** = ಪಾಂಡ್ಯ ದೇಶದ ಅರಸು - ಇಂದ್ರದ್ಯುಮ್ನ. ಮಹಾ ವಿಷ್ಣು ಭಕ್ತ. ಅಗಸ್ತ್ಯ ಋಷಿಯ ಶಾಪದಿಂದ ಗಾಜನಾಗಿ ಹುಟ್ಟಿ ಮೊಸಳೆಯ ಬಾಯಿಗೆ ಸಿಕ್ಕು ಪರಮಾತ್ಮನ ಕೃಪೆಯಿಂದ ಪಾರಾದನು. ಈ ಗಜರಾಜನನು ಹಿಡಿದ ಮೊಸಳೆ ಹೂಹೂ ಎಂಬ ಶಾಪಗ್ರಸ್ತ ಗಂಧರ್ವ.

**ಕರಿರಾಜ ವರದ** = ಗಜೇಂದ್ರನನ್ನು ಉದ್ಧಾರ ಮಾಡಿದವನು, ವಿಷ್ಣು

**ಸನಕಾದಿಗಳು** = ಇವರು ಶೃಸ್ಟಿಯ ಆದಿಯಿಂದ ಇರುವ ಬ್ರಹ್ಮನ ಮಾನಸ ಪುತ್ರರು. ಇವರು ನಾಲ್ಕು ಮಂದಿ - ಸನಕ, ಸನಂದನ, ಸನತ್ಸುಜಾತ ಮತ್ತು ಸನತ್ಕುಮಾರ. ಚಿಕ್ಕ ಮಕ್ಕಳ ರೂಪದವರು, ಮಹಾ ಜ್ಞಾನಿಗಳು.

**ಪೆರೆನೊಸಲು** = ಅರ್ಧ ಚಂದ್ರನಂತೆ ಹಣೆ

**ಲೋಲ** = ಅಲುಗಾಡುವ

**ಕಮಲಾಲಯಾ** = ಲಕ್ಷ್ಮಿ

**ಹವ್ಯವಾಹನ** = ಬೆಂಕಿ (ಅಗ್ನಿ)

**ದೇವಗಂಗೆ** = ಭಾಗೀರಥಿ

**Classification:** Keerthane
**Ankita:** purandara vittala
**Location:** kanchi or kanchipura, (kanci or kancipura) is located about 75 kms from Chennai. Varada Raja Swamy temple is situated very close to Kanchi. This place is called Karigiri (Hastigiri) situated on the banks of River Vegavati (vEgavatI) and the moorty is Kari Varada. As per our puranas' Gajendra Moksha occurred here. It is believed that Lord Narayana (Vishnu) appeared for Brahma and Narada also in this place. Here Purandara Dasa has praised Lord Kariraja Varada. Punyakoti is the name of the aeroplane belonging to the temple.
**Category:** Vishnu Stuti, Darshana Sambrama, Gajendra moksha
**Sub-Category:** Vishnu, achyuta, punya, gaja, sura, Lakshmi, Kasturi, kai, bhumi, loka, padma, vaikunta, surya, bhava, kaadu, kivi, muni, mangala, gange, pita,
**Pravachana:** NA
**Explanation:** NA